ಬೀಳ್ಕೊಡುವಾಗ ಸೆಮಿನಾರಿನ ನೆಪಕೊಟ್ಟಿದ್ದೆ; ನಾನು ಕೈಹಿಡಿದವಳು ಮೆಡಿಕಲ್ ಚೆಕಪಿಗೆ ಹೋಗುವಾಗಾದರೂ ಜತೆಗಿದ್ದೆಯಾ? ಉಪ್ಪು ತಿಂದವರು...' ಎಂಬರ್ಥದಲ್ಲಿ ನಿಟ್ಟಿಸುತ್ತ, ನೀರಿನ ಲೋಟವನ್ನು ಸಶಬ್ದವಾಗಿ ಮುಂದಿಟ್ಟು ಹೋಗುತ್ತಾಳೆ. ಅವಳ ನಿರ್ಲಿಪ್ತ ಮೌನ ಮಸೆದ ಕತ್ತಿಯಂತೆ ದೇಹದ ಇಷ್ಟಿಷ್ಟೆ ತೊಗಲನ್ನು ಹಿಡಿದು ಕೊಯ್ಯುತ್ತದೆ. ಚೀತ್ಕರಿಸುವ ನನ್ನ ಭಾಷಣಕ್ಕಿಲ್ಲದ ಶಕ್ತಿ ಈಕೆಯ ಗಾಢ ಮೌನಕ್ಕಿದೆ. 'ಮುನ್ನುಡಿ ಬರೆಯಲಾರೆ; ಭಾಷಣಕ್ಕೆ ಹೋಗಲಾರೆ' ಎಂದು ಘೋಷಿಸಿಕೊಂಡಿರುವವರೆಲ್ಲ ಎಂತಹ ಜಾಣರು! ಈಗ ಅಷ್ಟೊಂದು ಬೇಡಿಕೆಯಿಲ್ಲದ ನಾನು ಹಾಗೆ ಘೋಷಿಸಿದರೆ ಯಾರು ತಾನೇ ನಂಬುತ್ತಾರೆ? ಸದ್ಯ ಒಪ್ಪಿರುವ ಕಾರ್ಯಕ್ರಮ ರಾಷ್ಟ್ರನಾಯಕರ ಅಗಲಿಕೆಯಿಂದಲೊ ಭಾರೀ ಮಳೆಯಿಂದಲೊ ಭಾರತ ಬಂದ್‌ನಿಂದಲೊ ರದ್ದಾಗುವ ಸುದ್ದಿ ಬರಲಿ ಎಂದು ಹಾರೈಸುತ್ತೇನೆ. ಆದರೆ ಪಾಪಿ ಹುತ್ತಕ್ಕೆ ಕೈಹಾಕಿದರೂ ವಿಷವಿಲ್ಲದ ಹಾವೇ ಕಚ್ಚುತ್ತದೆ.

ಧಗಧಗಿಸುವ ಸಿಟ್ಟನ್ನು ಯಾರ ಮೇಲೆ ಕಾರಲಿ ಎಂದು ಯೋಚಿಸುವಾಗ, ಹೊಳೆಯುತ್ತ ಹಾಸಿಗೆಯ ಮೇಲೆ ಪವಡಿಸಿರುವ ಮೊಬೈಲು ಕಾಣುತ್ತದೆ. ಇದನ್ನು ಸಹಸ್ರ ಚೂರಾಗುವಂತೆ ನೆಲಕ್ಕಪ್ಪಳಿಸಬೇಕು. ಇದೇ ತಾನೇ ನನ್ನನ್ನು ಮಂದಿಗೆ ಹಿಡಿದುಕೊಟ್ಟಿದ್ದು? ಆದರೆ ಹತ್ತುಸಾವಿರ ತೆತ್ತು ತಂದ ಅದನ್ನು ಓಡಿನ ಚೂರಿನಂತೆ ಎಸೆಯಲಾರೆ. ಬುತ್ತಿ ಜತೆ ಒಯ್ದ ಬಾಟಲಿ, ಚಮಚ, ಬಾಕ್ಸಿನ ಮುಚ್ಚಳ ಬಿಟ್ಟುಬಂದಿದ್ದಕ್ಕೇ ನಿದ್ದೆಮಾಡಗೊಡದವಳು, ಮೊಬೈಲು ಒಡೆದರೆ ಗತಿಯೇನು? ಸ್ಥಳೀಯ ಪತ್ರಿಕೆಯಲ್ಲಿ 'ಮೊಬೈಲ್ ಒಡೆದ ಭಯ: ಮನೆತೊರೆದ ಪತಿ' ಎಂಬ ತಲೆಬರೆಹ ಕಾಣಿಸುವುದು ಯಾರಿಗೆ ಶೋಭೆ? ಮೊಬೈಲ್ ಖರೀದಿಸಿದ ಆ ದಿನ ನೆನಪಾಗುತ್ತಿದೆ. ಎವರೆಸ್ಟ್ ಶಿಖರ ಮುಟ್ಟಿದ ಹರ್ಷದಲ್ಲಿ ಬಾಲ್ಯದ ಗೆಳೆಯನಿಗೆ ಕರೆ ಮಾಡಿ, 'ಮೊದಲ ಕರೆ ನಿನಗೇ ಅರ್ಪಣೆ' ಎಂದಿದ್ದೆ. ಆತ ಉಕ್ಕುವ ಉಮೇದಿನ ಮೇಲೆ ಬರ್ಫಿನ ನೀರು ಸುರಿಯುತ್ತ, 'ಸರಿಸರಿ. ಬಹಳ ಕುಣಿಯಬೇಡ. ನಿನ್ನ ಖಾಸಗಿತನ ಇವತ್ತಿಗೆ ಸತ್ತುಹೋಯಿತು. ಅದರ ದಫನ್ ಬಗ್ಗೆ ಯೋಚಿಸು' ಎಂದು ಹೇಳಿಟ್ಟಿದ್ದ. ಸಂತಸದ ಗಳಿಗೆಯಲ್ಲಿ ಸೂತಕದ ಮಾತಾಡಿದ ಅವನನ್ನು ಕ್ಷಮಿಸಿರಲಿಲ್ಲ. ಈಗ ಅವನೊಬ್ಬ ತ್ರಿಕಾಲಜ್ಞಾನಿ ಅನಿಸುತ್ತಿದೆ. ಮೊಬೈಲು ನನ್ನ ಕೊರಳಿಗೆ ಕಟ್ಟಿದ್ದ ರೇಡಿಯೊ ಕಾಲರ್; ಸಂಘಟಕರಿಗೆ ನನ್ನನ್ನು ಹಿಡಿದು ಕೊಡಲೆಂದೇ ನೇಮಕವಾಗಿರುವ ಸುಪಾರಿ ಕಿಲ್ಲರ್. ಕಷ್ಟಪಟ್ಟು ದುಡಿದ ರೊಕ್ಕಚೆಲ್ಲಿ ಖರೀದಿಸಿದ ಯಃಕಶ್ಚಿತ್ ವಸ್ತುವೊಂದು ನಮ್ಮ ವಿರುದ್ಧವೇ ತುಪಾಕಿಯಾಗಿ ಕಾರ್ಯಾಚರಣೆ ಮಾಡುವುದು ಎಂದರೇನು?

ಭಾಷಣಕ್ಕೆ ಒಪ್ಪಿದ ಬಳಿಕ, ಕಾರ್ಯಕ್ರಮವಿರುವ ಸ್ಥಳಕ್ಕೆ ಹೋಗುವ ಬಗ್ಗೆ ಮನೆಯಲ್ಲೊಂದು ವಿಚಾರ ಕಮ್ಮಟ. ನನ್ನ ಬಗ್ಗೆ ಕಿಂಚಿತ್ ಕರುಣೆ ಉಳಿಸಿಕೊಂಡಿರುವ ಮಗಳು, ಭೂಪಟ ಜಾಲಾಡಿ ಬಸ್ಸುಗಳ ವೇಳಾಪಟ್ಟಿ ಹುಡುಕಿ ಪರ್ಯಾಯ ಹಾದಿಗಳನ್ನು ಸೂಚಿಸುತ್ತಾಳೆ. ಎಲ್ಲವೂ ಒಂದಕ್ಕಿಂತ ಒಂದು ಬೆರಕಿ. ಏನು ಭಾಷಣ ಮಾಡಬೇಕು ಎನ್ನುವುದಕ್ಕಿಂತ ಹೇಗೆ ಹೋಗಿಬರಬೇಕು ಎನ್ನುವ ಫಿಕಿರಿನಿಂದ ತಲೆಯ ಹುಳ ಪತರಗುಟ್ಟುತ್ತವೆ. ಅದರಲ್ಲೂ ಬಸ್ ಮಾತ್ರ ಇರುವ ಊರಿಗೆ ಒಪ್ಪಿಕೊಂಡಾಗೆಲ್ಲ ದುಃಖ ಒತ್ತರಿಸುತ್ತದೆ. ರೈಲಾದರೆ ಲಗೇಜಿಡುವ ಅಟ್ಟಣಿಗೆಯ ಮೇಲೊ, ಕಿಟಕಿ ಪಕ್ಕದ ಸೀಟಿನಲ್ಲೊ ಕಾಲುಚಾಚಿ ಹಾಯಾಗಿ ಕುಳಿತು, ಬೇಕಾದ ಪುಸ್ತಕ ಓದುತ್ತ, ಸಾಕಾದಾಗ ಹೊರಗಿನ ದೃಶ್ಯ ಸವಿಯುತ್ತ, ನಡುನಡುವೆ ಬರುವ ಹುರಿದ ಶೇಂಗಾ, ಬೇಲ್ಪುರಿ, ಸೌತೆಕಾಯಿ ತಿನ್ನುತ್ತ, ನೂರು ಯೋಜನವಾದರೂ ಹೋದೇನು. ಊರಿಂಗೆ ಹೋಗುವ ದಾರಿಯನಾರು ತೋರಿದರೇನು, ಗುರಿ ತಾನೇ ಮುಖ್ಯ ಎನ್ನುವರುಂಟು. ಗುರಿಗಿಂತ